19ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷರು :- ವರದಿಯನ್ನು ಮಂಡಿಸಲಾಯಿತು.

ಪ್ರಕಟಣೆಗಳು

ಉಪಾಧ್ಯಕ್ಷರು :-

1. ವಿಧಾನಸಭಾ ಸದಸ್ಯರಾದ ಮಾನ್ಯ ಶ್ರೀ ವೈ.ಕೆ. ರಾಮಯ್ಯನವರು ದಿನಾಕ: 23-8-1993 ಪತ್ರದಲ್ಲಿ ತಾವು ಜನತಾ ಪಕ್ಷಕ್ಕೆ ರಾಜೀನಾಮೆ ನೀಡಿ ಜನತಾದಳ ಸೇರಿದ್ದೇನೆಂದು ಹಾಗೂ ವಿರೋಧ ಪಕ್ಷದ ನಾಯಕರಾದ ಶ್ರೀ ಆರ್. ವಿ. ದೇಶಪಾಂಡೆ ಅವರು ದಿನಾಂಕ: 23-8-1993ರ ಪತ್ರದಲ್ಲಿ ವಿಧಾನ ಸಭಾ ಸದಸ್ಯರಾದ ಶ್ರೀ ವೈ.ಕೆ. ರಾಮಯ್ಯನವರನ್ನು ಜನತಾದಳ ಪಕ್ಷಕ್ಕೆ ಸೇರಿಸಿಕೊಂಡಿರುವುದಾಗಿ ತಿಳಿಸಿದ್ದಾರೆ.

ಭಾರತ ಸಂವಿಧಾನದ 10ನೇ ಷೆಡ್ಯೂಲ್‌ನ 3(ಎ)(1) ಹಾಗೂ 4(1) (ಎ) (2)ರ ಪ್ರಕಾರ ಮಾನ್ಯ ಸದಸ್ಯರು ಜನತಾದಳ ಸೇರುವುದರಿಂದ, ಅವರ ವಿಧಾನಸಭಾ ಸದಸ್ಯತ್ವ ಅನರ್ಹಗೊಳ್ಳುವುದಿಲ್ಲವೆಂಬುದನ್ನು ಗಮನದಲ್ಲಿರಿಸಿ, ಶ್ರೀ ವೈ.ಕೆ. ರಾಮಯ್ಯನವರನ್ನು ಜನತಾದಳ ಪಕ್ಷದ ಸದಸ್ಯರೆಂದು ಪರಿಗಣಿಸಲಾಗಿದೆ.

2. ವಿಧಾನಸಭಾ ಸದಸ್ಯರಾದ ಮಾನ್ಯ ಶ್ರೀ ಸಿ. ಬೈರೇಗೌಡರವರು ದಿನಾಂಕ 23-8-1993ರ ಪತ್ರದಲ್ಲಿ ತಾವು ಜನತಾ ಪಕ್ಷಕ್ಕೆ ರಾಜೀನಾಮೆ ನೀಡಿ ಜನತಾದಳ ಸೇರಿದ್ದೇನೆಂದು ಹಾಗೂ ವಿರೋಧ ಪಕ್ಷದ ನಾಯಕರಾದ ಶ್ರೀ ಆರ್.ವಿ. ದೇಶಪಾಂಡೆರವರು ದಿನಾಂಕ :23-8-1993ರ ಪತ್ರದಲ್ಲಿ ವಿಧಾನಸಭಾ ಸದಸ್ಯರಾದ ಶ್ರೀ ಸಿ. ಬೈರೇಗೌಡರವರನ್ನು ಜನತಾದಳ ಪಕ್ಷಕ್ಕೆ ಸೇರಿಸಿಕೊಂಡಿರುವುದಾಗಿ ತಿಳಿಸಿದ್ದಾರೆ.

ಭಾರತ ಸಂವಿಧಾನ 10ನೇ ಷೆಡ್ಯೂಲ್‌ನ 3(ಎ) (1) ಹಾಗೂ 4(1) (ಎ) (2)ರ ಪ್ರಕಾರ ಮಾನ್ಯ ಸದಸ್ಯರು ಜನತಾದಳ ಸೇರುವುದರಿಂದ, ಅವರ ವಿಧಾನಸಭಾ ಸದಸ್ಯತ್ವ ಅನರ್ಹಗೊಳ್ಳುವುದಿಲ್ಲವೆಂಬುದನ್ನು ಗಮನದಲ್ಲಿರಿಸಿ, ಶ್ರೀ ಸಿ. ಬೈರೇಗೌಡರವರನ್ನು ಜನತಾದಳ ಪಕ್ಷದ ಸದಸ್ಯರೆಂದು ಪರಿಗಣಿಸಲಾಗಿದೆ.

3. ವಿಧಾನ ಸಭಾ ಸದಸ್ಯರಾದ ಮಾನ್ಯ ಶ್ರೀ ಎಂ.ಪಿ. ವೆಂಕಟೇಶ್‌ರವರು ದಿ:22-8-1993ರ ಪತ್ರದಲ್ಲಿ ತಾವು ಜನತಾ ಪಕ್ಷಕ್ಕೆ ರಾಜೀನಾಮೆ ನೀಡಿ ಕಾಂಗ್ರೆಸ್(ಐ) ಪಕ್ಷಕ್ಕೆ ಸೇರಿದ್ದೇನೆಂದು ಹಾಗೂ ಕಾಂಗ್ರೆಸ್(ಐ) ಪಕ್ಷದ ನಾಯಕರು ಹಾಗೂ ಮುಖ್ಯಮಂತ್ರಿಗಳಾದ ಶ್ರೀ ಎಂ.ವೀರಪ್ಪಮೊಯಿಲಿ ಅವರು ದಿನಾಂಕ :24-8-1993ರ ಪತ್ರದಲ್ಲಿ ವಿಧಾನ ಸಭಾ ಸದಸ್ಯರಾದ ಶ್ರೀ ಎಂ.ಪಿ. ವೆಂಕಟೇಶ್‌ರವರನ್ನು ಕಾಂಗ್ರೆಸ್(ಐ) ಪಕ್ಷಕ್ಕೆ ಸೇರಿಸಿಕೊಂಡಿರುವುದಾಗಿ ತಿಳಿಸಿದ್ದಾರೆ.

ಭಾರತ ಸಂವಿಧಾನದ 10ನೇ ಷೆಡ್ಯೂಲ್‌ನ 3(ಎ) (1) ಹಾಗೂ 4(2) (ಎ) (2)ರ ಪ್ರಕಾರ ಮಾನ್ಯ ಸದಸ್ಯರು ಕಾಂಗ್ರೆಸ್(ಐ)ಪಕ್ಷಕ್ಕೆ ಸೇರುವುದರಿಂದ, ಅವರ ವಿಧಾನ ಸಭಾ ಸದಸ್ಯತ್ವ ಅನರ್ಹಗೊಳ್ಳುವುದಿಲ್ಲವೆಂಬುದನ್ನು ಗಮನದಲ್ಲಿರಿಸಿ, ಶ್ರೀ ಎಂ.ಪಿ. ವೆಂಕಟೇಶ್‌ರವರನ್ನು ಕಾಂಗ್ರೆಸ್(ಐ) ಪೆಕ್ಷದ ಸದಸ್ಯರೆಂದು ಪರಿಗಣಿಲಾಗಿದೆ.

ವಿಷಯ :- ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಗೈರು ಹಾಜರಿಯಲ್ಲಿ ಸಭೆಯ ಅಧ್ಯಕ್ಷತೆಯನ್ನು ವಹಿಸುವ ಸದಸ್ಯರುಗಳ ಪಟ್ಟಿ :-